ದಿನಾಂಕಃ **13.12.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಜಿ.ಎಸ್.ಪಿ ರವರಿಂದಃ

ನಿಪಿ-**2** ಕ್ರಯ ಪತ್ರ ಮತ್ತು ನಿಪಿ-**3** ಹಕ್ಕು ಬಿಡುಗಡೆ ಪತ್ರದಲ್ಲಿ ದಾವಾ ಸ್ವತ್ತನ್ನು ಗ್ರಾಮ ಠಾಣಾ ಎಂದು ಉಲ್ಲೇಖಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ನಿಪಿ-**2** ಕ್ರಯ ಪತ್ರ ಮತ್ತು ನಿಪಿ-**3** ಹಕ್ಕು ಬಿಡುಗಡೆ ಪತ್ರದಲ್ಲಿನ ಸ್ವತ್ತನ್ನು ಗ್ರಾಮ ಠಾಣಾ ಸ್ವತ್ತು ಎಂದು ನಮೂದಿಸಲಾಗಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-**2** ಕ್ರಯ ಪತ್ರ ಮತ್ತು ನಿಪಿ-**3** ಹಕ್ಕು ಬಿಡುಗಡೆ ಪತ್ರದಲ್ಲಿ ಅಡಕಗೊಂಡಿರುವ ಸ್ವತ್ತನ್ನು ಗ್ರಾಮ ಠಾಣಾ ಸ್ವತ್ತು ಎಂದು ಉಲ್ಲೇಖಿಸಿರುತ್ತದೆ ಎಂದರೆ ಸರಿ. ನಾಯಂಡಹಳ್ಳಿ ಗ್ರಾಮ ಸರ್ವೆ ನಂ.**47** ಜಮೀನಿಗೆ ಸಂಬಂಧಿಸಿ ನನ್ನ ತಂದೆ ಮುತ್ತ ಪ್ರತಿವಾದಿ ನಡುವೆ ಯಾವುದೇ ವ್ಯವಹಾರ ಆಗಿರಲಿಲ್ಲ. ಈ ಬಗ್ಗೆ ನನ್ನ ಮತ್ತು ಪ್ರತಿವಾದಿಯು ನಡುವೆ ಸಹ ಯಾವುದೇ ವ್ಯವಹಾರ ಆಗಿರುವುದಿಲ್ಲ. ನಿಪಿ-**17** ದಾಖಲೆ ದಾವಾ ಸಂಖ್ಯೆ ಓ.ಸ್. ನಂ.**2313/2008** ದಾವಾ ಪತ್ರದಲ್ಲಿ ಓ.ಸ್. ನಂ.**7638/1999** ಪ್ರಕರಣದ ಬಗ್ಗೆ ಉಲ್ಲೇಖ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ಓ.ಸ್. ನಂ.**7638/1999** ಪ್ರಕರಣದ ದಾವಾ ಪತ್ರವನ್ನು ತೋರಿಸಿದರೆ ಸಾಕ್ಷಿಯು ದಾವಾ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-**3** ಎಂದು ಗುರುತಿಸಲಾಯಿತು. ನಿಡಿ-**3** ದಾವೆಯನ್ನು ನನ್ನ ತಂದೆಯು ಈ

ಪ್ರಕರಣದ ಪ್ರತಿವಾದಿ **2** ಮತ್ತು **3** ರವರ ವಿರುದ್ಧ ಸಲ್ಲಿಸಿದ್ದರು. ನಿಡಿ-**3** ದಾವೆಯನ್ನ ನನ್ನ ತಂದೆಯು ಈ ದಾವಾ ದಲ್ಲಿ ನಿಪಿ-**2** ಮತ್ತು **3** ಎಂದು ಗುರುತಿಸಿರುವ ದಾಖಲೆಗಳ ಸ್ವತ್ತಿನ ಮೇಲೆ ಶಾಶ್ವತ ನಿರ್ಭಂದಕಾಜ್ಞೆ ಕೋರಿ ಸಲ್ಲಿಸಿದ್ದರು. ನಿಡಿ-**3** ದಾವೆಯಲ್ಲಿ ನಾನು ಹಾಜರಾಗಿರುತೇನೋ ಇಲ್ಲವೋ ಎಂದು ನೆನಪಿಲ್ಲ. ಸಾಕ್ಷಿಗೆ ನಿಡಿ-**3** ಪ್ರಕರಣದಲ್ಲಿ ನೀವು ವಾದಿ ಪರ ವಕೀಲರಾಗಿ ಕತರ್ವ್ಯ ನಿರ್ವಹಿಸಿರುತೀರಿ ಎಂದು ವಕಾಲತ್ ನ ದೃಢಿಕೃತ ನಕಲನ್ನು ತೋರಿಸಿದರೆ ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ವಕಾಲತನ್ನು ನಿಡಿ-**4** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನನ್ನ ಸಿನಿಯರ್ ವಕೀಲರು ನಡೆಸುತ್ತಿದ್ದರು ಎಂದು ನುಡಿಯುತ್ತಾರೆ. ನಿಪಿ-**17** ಒ.ಎಸ್ ನಂ.**2313/2008** ಪ್ರಕರಣದ ದಾವಾ ಪತ್ರದಲ್ಲಿ ಮೂಲ ದಾವೆ ಸಂ.**1309/2006** ಪ್ರಕರಣದ ಬಗ್ಗೆ ಉಲ್ಲೇಖಿಸಲಾಗಿರುತ್ತದೆ ಎಂದರೆ ಸರಿ. ಮೂಲ ದಾವೆ ಸಂ.**1309/2006** ಪ್ರಕರಣವನ್ನು ಈ ಪ್ರಕರಣದ **1** ನೇ ಪ್ರತಿವಾದಿ ನಾಗರತ್ನಮ್ಮ ರವರು ಈ ಕೇಸಿನ ಪ್ರತಿವಾದಿ **2** ಮತ್ತು **3** ರವರ ವಿರುದ್ಧ ಶಾಶ್ವತ ನಿರ್ಭಂದಕಾಜ್ಞೆ ಕೋರಿ ಸಲ್ಲಿಸಿದ್ದರು. ಸದರಿ ದಾವೆಯನ್ನು **1** ನೇ ಪ್ರತಿವಾದಿ ನಾಗರತ್ನಮ್ಮ ರವರು ಅವರ ಬಾಬ್ತು ಸ್ವತ್ತಾದ ಮತ್ತು ಈ ಪ್ರಕರಣದಲ್ಲಿ ನಿಪಿ-**2** ಮತ್ತು **3** ಪ್ರಕರಣದಲ್ಲಿ ಅಡಕಗೊಂಡಿರುವ ಸ್ವತ್ತಿಗೆ ಸಂಬಂಧಿಸಿ ಸಲ್ಲಿಸಿದ್ದರು. ಮೂಲ ದಾವೆ ಸಂ.**1309/2006** ಪ್ರಕರಣದಲ್ಲಿ ನಾನು ವಾದಿ ಪರ ವಕೀಲರಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದೆ ಎಂದರೆ ಇರಬಹುದು. ಮೂಲ ದಾವೆ ಸಂ.**1309/2006**

ಪ್ರಕರಣ ತೀರ್ಪು ಬರುವರೆಗೆ ನಾನು ನ್ಯಾಯಾಲಯಕ್ಕೆ ವಕೀಲರಾಗಿ ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ. ನಾನು ಸದರಿ ದಾವೆಯಲ್ಲಿ ವಾದಿ ಪರ ವಕೀಲರಾಗಿ ಮುಂದುವರೆಯಲು ನಿರಾಕರಿಸಿದ ಮೆರೆಗೆ ವಾದಿ ಪರ ವಕೀಲರ ವಕಾಲತ್ ಗೆ ಎನ್.ಓ .ಸಿ ಕೊಟ್ಟಿರುತ್ತೇನೆ. ನಾನು ವಕಾಲತ್ ಗೆ ಎನ್.ಓ .ಸಿ ಕೊಟ್ಟ ನಂತರ ನಾನು ನನ್ನ ಸಹೋದರ ಸೂರ್ಯ ನಾರಾಯಣ್ ಮತ್ತು ನನ್ನ ತಾಯಂದಿರಾದ ಕಮಲಮ್ಮ ಮತ್ತು ಗಂಗಮ್ಮ ರವರು ಪಕ್ಷಗಾರನಾಗಿ ಮಾಡಿಕೊಳ್ಳುವಂತೆ ಸದರಿ ದಾವೆಯಲ್ಲಿ ಅರ್ಜಿ ಸಲ್ಲಿಸಿದ್ದೇವು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.